


International Journal of Kannada Research
www.kannadajournal.com

**ISSN: 2454–5813**
IJKR 2020; 6(3): 01-02
© 2020 IJKR
www.kannadajournal.com
Received: 01-05-2020
Accepted: 03-06-2020

**Mallika Kumari**
S.V.P Research Centre
Mangalagangothri
Mangalore University
Dakshina Kannada
Karnataka India

**Corresponding Author:**
**Mallika Kumari**
S.V.P Research Centre
Mangalagangothri
Mangalore University
Dakshina Kannada
Karnataka India

# ಕನ್ನಡದ ಹನಿಗವನಗಳು

**Mallika Kumari**

ಹತ್ತನೇ ಶತಮಾನದ ಮಹಾಕವಿ ಪಂಪನಿಂದ ಪ್ರಾರಂಭವಾದ ಕನ್ನಡ ಸಾಹಿತ್ಯ ಚರಿತ್ರೆಯು 21ನೇ ಶತಮಾನದವರೆಗೆ ಸಾಕಷ್ಟು ವೈವಿಧ್ಯಮಯವಾಗಿ ಹಾಗೂ ಶ್ರೀಮಂತವಾಗಿ ಬೆಳೆದು ಬಂದಿದೆ. ಎಲ್ಲಾ ಕಾಲಕ್ಕೂ ಕಾವ್ಯಕ್ಕೆ ಮನ್ನಣೆ ಇದ್ದೇ ಇದೆ. ಸೌಂದರ್ಯಾನುಭೂತಿ ಮನುಷ್ಯನ ಸಹಜ ಗುಣ. ಕವಿತೆ ಸೌಂದರ್ಯ ಸೃಷ್ಟಿಸುವ ಆವಿಷ್ಕಾರ. ಭೂಮಿಯಲ್ಲಿ ಮನುಷ್ಯ ಮತ್ತು ಸೌಂದರ್ಯದ ಕಲ್ಪನೆ ಇರುವಷ್ಟು ದಿನ ಕಾವ್ಯ ಇರುತ್ತದೆ. ಹನಿಗವನಗಳು ಆಧುನಿಕ ಕನ್ನಡ ಕಾವ್ಯದಲ್ಲಿ ಕಾಣಿಸಿಕೊಂಡ ಇತ್ತೀಚೆಗಿನ ಒಂದು ಕಾವ್ಯ ಪ್ರಕಾರ.

ಹನಿಗವನಗಳು ಆಧುನಿಕ ಕನ್ನಡ ಕಾವ್ಯದಲ್ಲಿ ಪ್ರಸ್ತುತ ದಿನಗಳಲ್ಲಿ ಅತ್ಯಂತ ಜನಪ್ರಿಯವಾಗಿ ಪ್ರಚಾರದಲ್ಲಿರುವ ಒಂದು ಕಾವ್ಯ ಪ್ರಕಾರ. ಸುಭಾಷಿತ, ಮಂತ್ರಗಳು, ಸ್ತೋತ್ರಗಳು, ಶ್ಲೋಕಗಳು ಸಂಸ್ಕೃತ ಸಾಹಿತ್ಯದಲ್ಲಿ ಕಾಣಿಸಿಕೊಂಡ ಹ್ರಸ್ವರೂಪದ ರಚನೆಗಳು. ಕನ್ನಡದ ಮಹಾಕಾವ್ಯಗಳಲ್ಲೂ ಬಿಡಿಯಾಗಿ ಅಥವಾ ಸ್ವಯಂಪೂರ್ಣವಾಗಿ ಅರ್ಥ ಬಿಂಬಿಸಬಲ್ಲ ರಚನೆಗಳೂ ಇವೆ. ಇಲ್ಲಿ ಸ್ವತಂತ್ರವಾದ ಮಾದರಿಯ ಪದ್ಯಗಳಿವೆ; ಕಾವ್ಯವನ್ನು ಕಾಲದ ಕೂಸು ಎನ್ನುತ್ತೇವೆ. ಆಧುನಿಕ ದಿನಗಳ ಕಾರ್ಯದೊತ್ತಡದ ಸಂದರ್ಭದಲ್ಲಿ ಅದಕ್ಕನುಗುಣವಾದ ಹ್ರಸ್ವ ರೂಪದ ಹನಿಗವನಗಳು ಹೆಚ್ಚು ಹೆಚ್ಚು ಜನಪ್ರಿಯತೆಯನ್ನು ಗಳಿಸುವುದು ಗಮನಾರ್ಹವಾದ ಸಂಗತಿ.

ಎರಡನೆಯ ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ಮೊತ್ತಮೊದಲ ಬಾರಿಗೆ ಮುಕ್ತಕದ "ಇಡುಕುಂಗಬ್ಬಂ"ದ ಲಕ್ಷಣವನ್ನು ಕಾಣಬಹುದು. ಮುಕ್ತಕವೆಂದರೆ ಒಂದು ಕಾವ್ಯಪ್ರಕಾರವಾಗಿದ್ದು, ಸ್ವಯಂಪೂರ್ಣವಾದ ಬಿಡಿಪದ್ಯಗಳು. ಈ ರೀತಿಯ ಲಕ್ಷಣಗಳನ್ನು ಕನ್ನಡದ ಶಾಸನಗಳಾದ ಚಿತ್ರದುರ್ಗ ಜಿಲ್ಲೆಯ ತಮಟಕಲ್ಲು ಶಾಸನ, ಕಪ್ಪೆಅರಭಟನ ಶಾಸನ, ಶ್ರವಣಬೆಳಗೊಳದ ಶಾಸನ ಹಾಗು ಕವಿರಾಜಮಾರ್ಗದಲ್ಲೂ ಅಂಥವು ದೊರೆಯುತ್ತವೆ. ಇನ್ನು ಪಂಪ, ಜನ್ನ, ಷಡಕ್ಷರ, ಹರಿಹರ, ಆಂಡಯ್ಯ, ರತ್ನಾಕರವರ್ಣಿ ಮೊದಲಾದ ಎಲ್ಲಾ ಪೂರ್ವ ಕವಿ ಕೃತಿಗಳಲ್ಲೂ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಳ್ಳುವಂಥ ಪದ್ಯಗಳಿವೆ. ಅವೆಲ್ಲವೂ ಶಕ್ತಿಯುತ ಮುಕ್ತಕಗಳೇ ಆಗಿವೆ. ಹಳಗನ್ನಡದ ತಾತ್ತ್ವಿಕ ಗ್ರಂಥಗಳಲ್ಲೂ, ಸಂಕಲನ ಗ್ರಂಥಗಳಲ್ಲೂ, ಇಂಥವು ಸಿಗುತ್ತವೆ. ವಚನಗಳಂತೂ ಬಿಡಿಬಿಡಿ ರಚನೆಗಳೇ. ಸರ್ವಜ್ಞನ ತ್ರಿಪದಿಗಳು ಕೂಡ. ಇವು ಸಮಾಜದಲ್ಲಿ ಉಂಟು ಮಾಡಿದ ಪರಿಣಾಮ ಅದ್ಭುತವಾದದ್ದು. ಅಕ್ಷರಸ್ಥರಿಗೂ, ಅನಕ್ಷರಸ್ಥರಿಗೂ ಇವು ಪರಮಾಪ್ತವಾಗಿ ಬಿಟ್ಟವು. ಅವರ ಬದುಕನ್ನು ತಿದ್ದಿದವು ಹಾಗೂ ರೂಪಿಸಿದವು. ಈ ರೀತಿಯ ರಚನೆ ಅಲ್ಲಿಗೇ ನಿಂತು ಹೋದದ್ದು ಈ ಪ್ರಕಾರಕ್ಕೆ ಬಿದ್ದ ದೊಡ್ಡ ಹೊಡೆತವೇ ಆಯಿತು.

ಅನಂತರದಲ್ಲಿ, ನವೋದಯ ಕಾಲದಲ್ಲಿ ಹನಿಗವನ ಪ್ರಕಾರ ಮರುಹುಟ್ಟು ಪಡೆದದ್ದು ತೀ.ನಂ.ಶ್ರೀ, ಜಿ.ಪಿ.ರಾಜರತ್ನಂ, ವಿ.ಜಿ.ಭಟ್ ಇವರುಗಳ

ಪ್ರಯತ್ನದಿಂದ ಎನ್ನಲಾಗಿದೆ. ತೀ.ನಂ.ಶ್ರೀಯವರು 'ಮುಕ್ತಕ' ಹೆಸರನ್ನು ಬಳಕೆಗೆ ತಂದರೆ, ಜಿ.ಪಿ.ರಾಜರತ್ನಂ ಅದಕ್ಕೆ 'ಪುಟಾಣಿ' ಎಂದು ನಾಮಕರಣ ಮಾಡಿದರು. ವಿ.ಜಿ.ಭಟ್ 'ಚುಟುಕು' ಎಂದು ಹೆಸರಿಸಿ, ಈ ಪ್ರಕಾರವನ್ನು ಇನ್ನಷ್ಟು ಹಿಗ್ಗಿಸಿದರು. ಇವರ ಬಳಿಕ ಎಂ.ಅಕಬರ ಅಲಿ ಹಾಗೂ ತೋಪಖಾನೆ ಶ್ರೀನಿವಾಸ್ ಇವರುಗಳು ಜೊತೆಯಾಗಿ "ಎಮ್.ಟಿ.ಚುಟುಕಗಳು" ಹೆಸರಿನಲ್ಲಿ ಸಂಕಲನ ತಂದು ಚುಟುಕು ಪ್ರಕಾರವನ್ನು ಚುರುಕುಗೊಳಿಸಿದರು ಮತ್ತು ಸದೃಢಗೊಳಿಸಿದರು. ದಿನಕರ ದೇಸಾಯಿಯವರ ಚೌಪದಿಗಳು ಚುಟುಕಗಳೆಂದೇ ಮನೆಮಾತಾದವು. ಕುವೆಂಪು ಅವರೂ ಹನಿಗವನಗಳ ಸಂಕಲನ ತಂದದ್ದು, ಅವುಗಳನ್ನು 'ಕಿಡಿ ಕವನಗಳು','ಹುಡಿ ಕವನಗಳು' ಎಂದು ಗುರುತಿಸಿದ್ದೂ ಚಾರಿತ್ರಿಕವಾಗಿ ಗಮನಾರ್ಹ ಸಂಗತಿಯೇ.

ತೀ.ನಂ.ಶ್ರೀಯವರು ಸಂಸ್ಕೃತ ಮುಕ್ತಕ ಪರಂಪರೆಯನ್ನು ಕನ್ನಡಕ್ಕಿತ್ತರೆ, ಜಿ.ಪಿ.ರಾಜರತ್ನಂ, ವಿ.ಜಿ.ಭಟ್, ಅಕಬರ ಅಲಿ, ತೋಪಖಾನೆ ಶ್ರೀನಿವಾಸರು ಇವರೆಲ್ಲ ಪಾಶ್ಚಾತ್ಯ ಸಾಹಿತ್ಯದ ಎಪಿಗ್ರಾಂ ಹಾಗೂ ಲಿಮಿರಿಕ್ ಕಾವ್ಯ ಪ್ರಕಾರಗಳನ್ನು ಕನ್ನಡಕ್ಕೆ ಕರೆತಂದರು. ಗ್ರೀಕ್, ಲ್ಯಾಟಿನ್, ಇಂಗ್ಲೀಷ್, ಜರ್ಮನ್, ಫ್ರೆಂಚ್ ಮುಂತಾದ ಅನ್ಯಭಾಷೆಗಳಲ್ಲಿ ಎಪಿಗ್ರಾಂ ಎಂದು ಹೇಳುವುದನ್ನೇ ತಾವು ಅನುಸರಿಸಿದ್ದಾಗಿ ರಾಜರತ್ನಂ ಹೇಳಿಕೊಳ್ಳುತ್ತಾರೆ. ಹಾಗೆಯೇ ಸಂಸ್ಕೃತದ ಮುಕ್ತಕ–ಚಾಟುಗಳನ್ನೂ ಕೂಡ, ಅವರು ಭಾವಾಂತರಿಸಿದ್ದಾರೆ. ಬೌದ್ಧರ 'ಝೇನ್', ಉರ್ದುವಿನ 'ರೂಬಾಯಿ', ಜಪಾನಿ 'ಹಾಯ್ಕು', 'ಸೆನ್ರ್ಯೂ' ಈ ಮಾದರಿಗಳಲ್ಲೂ ಹನಿಗವನಗಳನ್ನು ಬರೆದವರಿದ್ದಾರೆ.

ಆದರೂ ಕನ್ನಡದಲ್ಲಿ ಹನಿಗವನ ಪ್ರಕಾರವೆಂಬುದು ಜಾನಪದ ಮೂಲದ್ದೇ ಆಗಿದೆ; ಎಂಬುದೇ ಹೆಚ್ಚು ಉಚಿತವಾಗುತ್ತದೆ. ಅಂದರೆ ಮನುಷ್ಯ ಯಾವಾಗ ಮಾತು ಕಲಿತನೋ, ಆವಾಗ ಆತ ಶಬ್ದಗಳ ರೂಪದಲ್ಲಿ ತನ್ನ ಭಾವನೆಗಳನ್ನು ಹೊರಹಾಕಲು ಆಸೆ ಪಟ್ಟಿದ್ದು, ಸ್ವಾಭಾವಿಕವೇ ಆಗಿದೆ. ಆವಾಗಿನಿಂದಲೇ ಆತ ಕಿರಿದಾದ ಹಾಗೂ ಹಿರಿದಾದ ರೀತಿಯಲ್ಲಿ ಕವನ ಕಟ್ಟಲು ತೊಡಗಿದನೆಂದು ನಾವು ತರ್ಕಿಸಬಹುದಾಗಿದೆ. ಎಂದರೆ ಸಣ್ಣ ಹಾಗೂ ದೊಡ್ಡ ಪದ ಇಲ್ಲವೇ ಹಾಡುಗಳಿಗೆ ಸದ್ಯದ ಅವಸರವೋ, ಪಂಥ– ಪಂಗಡಗಳೋ ಕಾರಣವಾಗಿರದೇ ಅವು ಅನುಭವದ ಪ್ರಕ್ರಿಯೆಗಳೇ ಆಗಿವೆ; ಎಂಬುದು ಹೆಚ್ಚು ಸಮಂಜಸ. ಅಂದರೆ ಯಾವುದೇ ಒಂದು ಆಶಯ, ಅನುಭವ, ಅಭಿವ್ಯಕ್ತಿಗೆ ತಕ್ಕಂತೆ ಹಿಗ್ಗಿಕೊಳ್ಳುತ್ತವೆ ಅಥವಾ ಕುಗ್ಗಿಕೊಳ್ಳವುದು ಸಹಜವಾಗಿರುತ್ತದೆ. ಜಾನಪದದಲ್ಲಿ ಅಸಂಖ್ಯಾತ ಪ್ರಮಾಣದಲ್ಲಿ ಕಿರಿಕವನಗಳಿವೆ. ಅವುಗಳು ತ್ರಿಪದಿಗಳಲ್ಲಿ, ದ್ವಿಪದಿಗಳಲ್ಲಿ, ಚೌಪದಿಗಳಲ್ಲಿ...... ಹೀಗೆ ಮಿತ ಸಾಲುಗಳಿದ್ದೂ ವಿಜೃಂಭಿಸುವ ರೀತಿ, ಅಪ್ಯಾಯಮಾನವಾಗುವ ರೀತಿ ಈಗಾಗಲೇ ಪ್ರಶಂಸೆಗೆ ಪಾತ್ರವಾಗಿದೆ. ಕಿರಿಕವನಗಳಲ್ಲಿ ಗುರುತಿಸಲಾಗುವ ಇಲ್ಲವೇ ಆರೋಪಿಸಲಾಗುವ ಇಡಿಕಿರಿತನ, ಚುರುಕುತನ, ತೀವ್ರತೆ, ವ್ಯಂಗ್ಯ ಅಥವಾ ಲಘುಹಾಸ್ಯ, ನವಿರು ಇತ್ಯಾದಿ ಇವುಗಳಲ್ಲೂ ರಾಶಿ ರಾಶಿ ದೊರೆಯುತ್ತವೆ.

80ರ ದಶಕದಲ್ಲಿ ಅತ್ಯುತ್ಸಾಹದಲ್ಲಿ ಚುಟುಕುಗಳಿಗಿಂತ ಭಿನ್ನವಾಗಿ ಆದರೂ ಚುಟುಕಾಗಿಯೇ ಬರೆಯಬೇಕೆಂಬ ಒತ್ತಾಸೆ ಹಲವಾರು ಕವಿಗಳನ್ನು ಕಾಡಿದ್ದು, ಕಂಡುಬರುತ್ತದೆ. 80ರ ದಶಕದ ಈಚೆಗಂತೂ ಹನಿಗವನ ಪ್ರಕಾರ ಒಂದು ಚಳವಳದ ಸ್ವರೂಪವನ್ನು ಪಡೆದದ್ದನ್ನು ಕಾಣಬಹುದು. ನವ್ಯದ ಸಂಕೀರ್ಣತೆ ಮತ್ತು ಉಪೇಕ್ಷೆ, ಬಂಡಾಯದ ಪೆಟ್ಟು, ದಲಿತರ ಸಿಟ್ಟು ಇವುಗಳಿಂದ ಗೊಂದಲಕ್ಕೊಳಗಾದವರು ಅನಿವಾರ್ಯವಾಗಿ ಹನಿಗವನಗಳತ್ತ ಸರಿದರು ಎನ್ನಲಾಗಿದೆ; ಅಂದರೆ ಹನಿಗವನಗಳು ನಾಯಕರಿಲ್ಲದ ಒಂದು ಪ್ರಕಾರ ಎಂಬುದೂ, ಯಾವುದೇ ಗುಂಪಿಗೆ ಸೇರದ್ದು ಎಂಬುದೂ ಇಲ್ಲಿ ಗಮನಿಸಲಾಗುವ ಸಂಗತಿ. ಇದು ಛಂದಸ್ಸಿನ ಕಟ್ಟನ್ನು ಕಳಕೊಂಡದ್ದೂ, ಹಲವರ ಪಾಲಿಗೆ ನಿಕಟವಾಗಲು ಇನ್ನೊಂದು ಕಾರಣವಾಗಿರಬಹುದಾಗಿದೆ. ಅಲ್ಲದೆ ಕವಿ ತನಗೆ ತೋಚಿದ ಯಾವುದೇ ಒಂದು ವಿಷಯದ ಕುರಿತು ಪ್ರತಿಕ್ರಿಯಿಸಬಹುದಾದ ಸ್ವಾತಂತ್ರ್ಯ ಕೂಡ ಇಲ್ಲಿದೆ. ಗಂಡು, ಹೆಣ್ಣು, ಗಂಡ, ಹೆಂಡತಿ, ಪ್ರೇಯಸಿ, ಮಳೆ, ಬೆಳೆ, ಕಳೆ, ಸೂರ್ಯ, ಚಂದ್ರ, ತಾರೆ, ಪ್ರಕೃತಿ, ಹುಟ್ಟು, ಸಾವು, ಜ್ಞಾನ, ವಿಜ್ಞಾನ, ಕಾವ್ಯ, ವಿಮರ್ಶೆ, ದಲಿತ, ಬಂಡಾಯ ಹೀಗೆ ಯಾವುದರ ಬಗ್ಗೆಯೂ ಪ್ರತಿಭೆ ಹೊಳೆಯಿಸಿದಂತೆ ಕವಿ ಸ್ಪಂದಿಸಬಹುದಾಗಿದೆ.

ಹನಿಗವನಗಳಲ್ಲಿ ಪ್ರಾಸ ಮತ್ತು ಛಂದಸ್ಸು ಇಲ್ಲದಿದ್ದರೂ ಅದರಲ್ಲಿ ಇರುವ ಕಲ್ಪನೆಯ ತಾಜಾತನ ಕಾವ್ಯದ ಪರಿಣಾಮವನ್ನು ಉಂಟು ಮಾಡುತ್ತದೆ.ಹನಿಗವನ ಬರೆಯುವವರಿಗೆ ಸಾಲುಗಳ ಮಿತಿ, ಛಂದಸ್ಸಿನ ಚೌಕಟ್ಟು, ಪ್ರಾಸ ಕೂಡಿಸುವ ತ್ರಾಸ ಇಲ್ಲದಿರುವುದರಿಂದ ಹೆಚ್ಚು ಸ್ವಾತಂತ್ರ್ಯವಿದೆ ಎಂಬುದು ಗಮನಾರ್ಹ. ಇದರಲ್ಲಿ ಸಾಲುಗಳ ಕಟ್ಟುಪಾಡು ಇಲ್ಲ. ಗಾತ್ರದಲ್ಲಿ ಚಿಕ್ಕದಾಗಿದ್ದು, ನೂರು ಮಾತುಗಳನ್ನು ಮೂರು ಮಾತಿನಲ್ಲಿ ಹೇಳಲು ಸಾಧ್ಯವಿದೆ. ಹನಿಗವನಗಳು ಎಲ್ಲಾ ದೇಶ, ಭಾಷೆಗಳಲ್ಲೂ ಕಾಣಸಿಗುತ್ತವೆ. ಇಂದು ಮನುಷ್ಯ ಅತಿಯಾದ ಮನಸ್ಸಿನ ಒತ್ತಡ, ಉದ್ವೇಗ, ಅತೃಪ್ತಿ, ಹತಾಶೆಯಿಂದ ಮಾನಸಿಕವಾಗಿ ಕೊರಗಿ ಹತ್ತು ಹಲವು ರೋಗಗಳಿಂದ ಬಳಲುತ್ತಿರುವುದು ಗಮನಾರ್ಹ ಸಂಗತಿ. ಇಂದಿನ ಖಾಯಿಲೆಗಳಿಗೆ ನೂರಕ್ಕೆ ಎಪ್ಪತ್ತೈದರಷ್ಟು ಭಾಗ ಮಾನಸಿಕ ಒತ್ತಡವೇ ಕಾರಣ. ಹನಿಗವನಗಳ ಮೂಲಕ ನಗುವುದರಿಂದ ದ್ವೇಷ, ಅಸೂಯೆ ದೂರವಾಗಿ ಆರೋಗ್ಯ ಉತ್ತಮಗೊಂಡು ಮನಸ್ಸಿನಲ್ಲಿ ನೆಮ್ಮದಿ, ಉತ್ಸಾಹ ಮೂಡಿ, ಜೀವನದಲ್ಲಿ ಆಸಕ್ತಿ, ಶಾಂತಿ, ಲವಲವಿಕೆ, ಹುಮ್ಮಸ್ಸುಗಳನ್ನು ಪಡೆಯಲು ಸುಲಭ ವಿಧಾನವಾಗಿದೆ.